ಹೆಚ್ಚುವರಿ ಶಿಕ್ಷಕರು

1401(890); ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ)

ಅ) ಶೃಂಗೇರಿ ವಿಧಾನ ಸಭಾ ಕ್ಷೇತ್ರದಲ್ಲಿರುವ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಶಾಲಾ ಶಿಕ್ಷಕರುಗಳ ಸಂಖ್ಯೆ ಎಷ್ಟು;

ಆ) ಹೆಚ್ಚುವರಿ ಶಿಕ್ಷಕರುಗಳನ್ನು ಇಲ್ಲಿಂದ ತೆರವುಗೊಳಿಸಲಾಗಿದೆಯೇ; ಹಾಗಿದ್ದಲ್ಲಿ, ಇವರನ್ನು ಯಾವ ತಾಲ್ಲೂಕುಗಳ ಶಾಲೆಗಳಿಗೆ ನಿಯುಕ್ತಿ ಮಾಡಲಾಗಿದೆ;

ಇ) ತರೀಕೆರೆ, ಕಡೂರು ಮತ್ತು ಚಿಕ್ಕಮಗಳೂರು ಕ್ಷೇತ್ರಗಳಲ್ಲಿರುವಂತಹ ಈ ರೀತಿಯ ಹೆಚ್ಚುವರಿ ಶಿಕ್ಷಕರ ಸಂಖ್ಯೆ ಎಷ್ಟು (ವಿವರ ನೀಡುವುದು);

ಈ) ಇಲ್ಲಿ ಹೆಚ್ಚುವರಿಯಾಗಿದ್ದಲ್ಲಿ, ಶೃಂಗೇರಿಯಿಂದ ಸದರಿ ಸ್ಥಳಗಳಿಗೆ ಹೆಚ್ಚುವರಿ ಎಂದು ತೆರವು ಮಾಡಿ ಸ್ಥಳ ನಿಯುಕ್ತಿ ಮಾಡಿದ ಉದ್ದೇಶಗಳೇನು;

ಉ) ಈ ಪ್ರಕ್ರಿಯೆಯಲ್ಲಿ ನಡೆದಿರುವ ಆರೋಪಗಳ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕಿಮ್ಮನೆ ರತ್ನಾಕರ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ)

ಸರ್ಕಾರಿ ಪ್ರಾಥಮಿಕ	ಸರ್ಕಾರಿ ಪ್ರೌಢ	ಅನುದಾನಿತ ಪ್ರಾಥಮಿಕ	ಅನುದಾನಿತ ಪ್ರೌಢ
922	239	43	155

ಆ)

ಸರ್ಕಾರಿ ಪ್ರಾಥಮಿಕ	ಸರ್ಕಾರಿ ಪ್ರೌಢ	ಅನುದಾನಿತ ಪ್ರಾಥಮಿಕ	ಅನುದಾನಿತ ಪ್ರೌಢ
2013–14ನೇ ಸಾಲಿನಲ್ಲಿ 2 ಹೆಚ್ಚುವರಿ ಹಿಂದಿ ಶಿಕ್ಷಕರನ್ನು ಅಗತ್ಯವಿದ್ದ ತರೀಕೆರೆ ಮತ್ತು ಬೀರೂರು ವಲಯಕ್ಕೆ ನಿಯುಕ್ತಿಗೊಳಿಸಿದೆ	1 ದೈಹಿಕ ಶಿಕ್ಷಣ ಶಿಕ್ಷಕರು (ಗ್ರೇಡ್–1) ಹುದ್ದೆಯನ್ನು ತರೀಕೆರೆ ತಾಲ್ಲೂಕಿಗೆ ನಿಯುಕ್ತಿಗೊಳಿಸಿದೆ	ಯಾವುದೇ ಶಿಕ್ಷಕರನ್ನು ಹೆಚ್ಚುವರಿಯಾಗಿ ತೆರೆವುಗೊಳಿಸಿರುವುದಿಲ್ಲ	ಯಾವುದೇ ಶಿಕ್ಷಕರನ್ನು ಹೆಚ್ಚುವರಿಯೆಂದು ತೆರವುಗೊಳಿಸಿರುವುದಿಲ್ಲ.
2014–15ನೇ ಸಾಲಿನಲ್ಲಿ ಸ್ಥಳಾಂತರಿಸುವ ಪ್ರಕ್ರಿಯೆ ಪ್ರಾರಂಬಿಸಿರುವುದಿಲ್ಲ	ಪ್ರಕ್ರಿಯೆ ಪ್ರಾರಂಬವಾಗಿಲ್ಲ	ಪ್ರಕ್ರಿಯೆ ಪ್ರಾರಂಬವಾಗಿಲ್ಲ	ಪ್ರಕ್ರಿಯೆ ಪ್ರಾರಂಬವಾಗಿಲ್ಲ.

ಇ)

ಸರ್ಕಾರಿ ಪ್ರಾಥಮಿಕ	ಸರ್ಕಾರಿ ಪ್ರೌಢ	ಅನುದಾನಿತ ಪ್ರಾಥಮಿಕ	ಅನುದಾನಿತ ಪ್ರೌಢ
2013–14ನೇ ಸಾಲಿನಲ್ಲಿ ತಾಲ್ಲೂಕು/ಕ್ಷೇತ್ರಗಳಿಗೆ ಮರುಹೊಂದಾಣಿಕೆ ಮಾಡಿಕೊಳ್ಳಲಾಗಿದೆ ಹೆಚ್ಚುವರಿ ಶಿಕ್ಷಕರು ಇರುವುದಿಲ್ಲ	5 ಹೆಚ್ಚುವರಿ ಶಿಕ್ಷಕರು ಮುಂದುವರೆದಿರುತ್ತಾರೆ	4 ಶಿಕ್ಷಕರು ಮುಂದುವರೆದಿರುತ್ತಾರೆ	18 ಶಿಕ್ಷಕರು ಮುಂದುವರೆದಿರುತ್ತಾರೆ
2014–15ನೇ ಪ್ರಕ್ರಿಯೆ ಪ್ರಾರಂಬವಾಗಿರುವುದಿಲ್ಲ	ಪ್ರಕ್ರಿಯೆ ಪ್ರಾರಂಭವಾಗಿಲ್ಲ	ಪ್ರಕ್ರಿಯೆ ಪ್ರಾರಂಭವಾಗಿಲ್ಲ	ಪ್ರಕ್ರಿಯೆ ಪ್ರಾರಂಭವಾಗಿಲ್ಲ

ಈ)

ಸರ್ಕಾರಿ ಪ್ರಾಥಮಿಕ	ಸರ್ಕಾರಿ ಪ್ರೌಢ	ಅನುದಾನಿತ ಪ್ರಾಥಮಿಕ	ಅನುದಾನಿತ ಪ್ರೌಢ
201ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ಶಾಲೆಗಳಲ್ಲಿ ಹಿಂದಿ ಶಿಕ್ಷಕರು ಹೆಚ್ಚುವರಿಯಾಗಿದ್ದು, ಸಂಬಂಧಿಸಿದ ತಾಲ್ಲೂಕಿನಲ್ಲಿ 201ಕ್ಕಿಂತ ಹೆಚ್ಚು ಮಕ್ಕಳಿರುವ ಶಾಲೆಗಳು ಇಲ್ಲದಿದ್ದರಿಂದ ಬೇರೆ ತಾಲ್ಲೂಕಿನಲ್ಲಿ ಅಗತ್ಯವಿರುವ ಶಾಲೆಗೆ ಸ್ಥಳಾಂತರಿಸಲಾಗಿದೆ	2 ದೈಹಿಕ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದು ಇಬ್ಬರು ಶಿಕ್ಷಕರನ್ನು ಅಗತ್ಯವಿರುವ ತರೀಕೆರೆ ತಾಲ್ಲೂಕಿಗೆ ಸ್ಥಳಾಂತರಿಸಲಾಗಿದೆ	ಶಿಕ್ಷಕರನ್ನು ಸ್ಥಳಾಂತರಿಸಿರುವುದಿಲ್ಲ	ಶಿಕ್ಷಕರನ್ನು ಸ್ಥಳಾಂತರಿಸಿರುವುದಿಲ್ಲ

ಉ)

ಸರ್ಕಾರಿ ಪ್ರಾಥಮಿಕ	ಸರ್ಕಾರಿ ಪ್ರೌಢ	ಅನುದಾನಿತ ಪ್ರಾಥಮಿಕ	ಅನುದಾನಿತ ಪ್ರೌಢ
ಆರೋಪಗಳು ಇರುವುದಿಲ್ಲ	ಆರೋಪಗಳು ಇರುವುದಿಲ್ಲ.	ಆರೋಪಗಳು ಇರುವುದಿಲ್ಲ	ಆರೋಪಗಳು ಇರುವುದಿಲ್ಲ

ಡಿಪ್ಲೋಮಾ–ಪಾಲಿಟೆಕ್ನಿಕ್ ಕೋರ್ಸುಗಳು